ಉಗ್ರಾಣಗಳ ವೇತನ ಹೆಚ್ಚಿಸುವುದು

೧೦೫೯. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಉಗ್ರಾಣಿಗಳು ಇದ್ದಾರೆ,

(ಆ) ಇವರು ಪಡೆಯುವ ಮಾಸಿಕ ವೇತನ ಎಷ್ಟು ?

(ಇ) ಇವರ ವೇತನವನ್ನು ಪರಿಷ್ಕರಿಸಲು ಸರ್ಕಾರವು ಶೀಘ್ರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

(ಅ) ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪೭೫ ಗ್ರಾಮ ಸಹಾಯಕರು (ಉಗ್ರಾಣಿಗಳು) ಕೆಲಸ ಮಾಡುತ್ತಿದ್ದಾರೆ.

(ಆ) ತಿಂಗಳಿಗೆ ೧೨೦ ರೂ. ಸಂಭಾವನೆಯನ್ನು ಕೊಡಲಾಗುತ್ತಿದೆ.

(ಇ) ಈ ಬಗ್ಗೆ ಬಂದಿರುವ ಮನವಿಗಳು ಸರ್ಕಾರದ ಪರ್ಯಾಲೋಚನೆಯಲ್ಲಿವೆ.

ಕರ್ನಾಟಕ ರಾಜ್ಯದಲ್ಲಿ ಸೇಂದಿಯಂ ಉತ್ಪಾದನೆ

೧೦೫೬. ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ಅಬ್ಕಾರಿ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೇ ?

(ಅ) ಕರ್ನಾಟಕ ರಾಜ್ಯದಲ್ಲಿ ಸೇಂದಿ ಕಟ್ಟುವ ವನಗಳಲ್ಲಿ ಸೇಂದಿ ಮರಗಳ ಸಂಖ್ಯೆ ಎಷ್ಟು ? ಈಗ ಒದಗಿಸುತ್ತಿರುವ ಸೇಂದಿ ಮರಗಳಿಂದಲೇ ಉತ್ಪತ್ತಿ ಆಗುತ್ತಿದೆಯೋ ಅಥವಾ ಬೇರೆ ಯಾವುದಾದರಿಂದ ತಯಾರಿಸಲಾಗುತ್ತಿದೆಯೇ ? (ಈಚಲು ಮರಗಳ ವಿವರ ತಾಲ್ಲೂಕುವಾರು, ಜಿಲ್ಲಾವಾರು ತಿಳಿಸುವುದು).

(ಆ) ಈಗ ಹಾಲಿ ಇರುವ ಶೇಂದಿ ಮರಗಳಿಂದ ಶೇಂದಿ ಉತ್ಪತ್ತಿ ಆಗುತ್ತಿದೆಯೋ ಅಥವಾ ಬೇರಾವುದಾದರಿಂದ ಶೇಂದಿ ತಯಾರಾಗುತ್ತಿದೆಯೋ (ತಾಲ್ಲೂಕುವಾರು ಮತ್ತು ಜಿಲ್ಲಾವಾರು ವಿವರಗಳನ್ನೊದಗಿಸುವುದು).

ಶ್ರೀ ರಮೇಶ್ ಜಿಗಜಿಣಗಿ (ಅಬ್ಕಾರಿ ರಾಜ್ಯ ಮಂತ್ರಿಗಳು).—

(ಅ) ಈಗ ಒದಗಿಸುತ್ತಿರುವ ಸೇಂದಿಯಂ ಸೇಂದಿ ಮರಗಳಿಂದಲೇ ಉಪ್ಪಾದಿಸಿ ತಯಾರಿಸಲಾಗುತ್ತಿದೆ. ತಾಲ್ಲೂಕುವಾರು, ಜಿಲ್ಲಾವಾರು ಶೇಂದಿ ಕಟ್ಟುವ ಮರಗಳ ಸಂಖ್ಯೆಯ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

(ಆ) ಈಗ ಹಾಲಿ ಇರುವ ಸೇಂದಿ ಮರಗಳಿಂದಲೇ ಸೇಂದಿ ಉತ್ಪತ್ತಿ ಆಗುತ್ತಿದೆ. ಸೇಂದಿ ಮರಗಳ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.